# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\9259\2017\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:15/02/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಎ.ಕೃಷ್ಣ ಬಿನ್ ಅಂಕಯ್ಯ, ನಂ.2267/6, 5ನೇ ಮುಖ್ಯ ರಸ್ತೆ, ವಿನಾಯಕ ನಗರ, ಮೈಸೂರು ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ವಿನಾಯಕ ನಗರ 5ನೇ ಮುಖ್ಯ ರಸ್ತೆ, ನಂ.2267/6ರ ನಿವಾಸಿಯಾದ ಶ್ರೀ.ಎ.ಕೃಷ್ಣ ಬಿನ್ ಅಂಕಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ತಹಶೀಲ್ದಾರಾದ ಶ್ರೀ.ಎಸ್.ಪಿ.ಮೋಹನ್ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ದೈತ್ಯನಕೆರೆ ಕಾವಲ್ ಗ್ರಾಮದ ಸರ್ವೆ ನಂ.1/35ಎ ಮತ್ತು 1/36ಎ ಜಮೀನುಗಳನ್ನು ತಾವು 2005ರಲ್ಲಿ ಕ್ರಯಕ್ಕೆ ಪಡೆದಿದ್ದು, ಕ್ರಯದಂತೆ ಖಾತಾ ಬದಲಾವಣೆ ಮಾಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಎದುರುದಾರರು ಸದರಿ ಜಮೀನನ್ನು 'ಬಿ' ಕರಾಬು ಜಮೀನಾಗಿರುವುದರಿಂದ ಖಾತೆ ಬದಲಾವಣೆ ಮಾಡಿಕೊಡಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿದ್ದಾರೆ. ಈ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದು, ಸದರಿಯವರು ತಮ್ಮ ಆದೇಶದಲ್ಲಿ ತಾವು 638 ಎಕರೆ ಜಮೀನನ್ನು ಹೊಂದಿರುವುದಾಗಿ ಆದೇಶಿಸಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ

ಆಕ್ಷೇಪಣೆಯಲ್ಲಿ-

Sd/-

ಆಕಾರಬಂದ್‌ನಂತೆ ದೈತ್ಯನಕೆರೆ ಕಾವಲ್ ಗ್ರಾಮದ ಸರ್ವೆ ನಂ.1/35ಎ ಮತ್ತು 1/36ಎ ರ ಒಟ್ಟು ವಿಸ್ತೀರ್ಣ 1726.34 ಆಗಿದ್ದು, ಈ ಜಮೀನು 'ಬಿ' ಖರಾಬು ಜಮೀನಾಗಿದೆ. ಬಿಳಿಕೆರೆ ಹೋಬಳಿ ದೈತ್ಯನಕೆರೆ ಕಾವಲ್ ಗ್ರಾಮದ ಸರ್ವೆ ನಂ.1 ಜಮೀನು ಮೂಲತಃ ಮೈಸೂರು ಅರಮನೆಗೆ ಸೇರಿದ ಕಾವಲ್ ಜಮೀನಾಗಿದ್ದು, ಸದರಿ ಜಮೀನು 1955ನೇ ಸಾಲಿನ ನಿಕಟಪೂರ್ವದಲ್ಲಿ ಕೆಲವರಿಗೆ ಅರಮನೆ ಮುಖಾಂತರ ನೇರವಾಗಿ ವರ್ಗಾವಣೆಯಾಗಿದ್ದು, ಆ ರೀತಿ ವರ್ಗಾವಣೆಯಾಗಿರುವ ಜಮೀನುಗಳನ್ನು ಹಕ್ಕುದಾರರುಗಳು ಕ್ರಯ ಮಾಡಿದ್ದಾರೆ. ಕ್ರಯದಂತೆ ಮ್ಯುಟೇಷನ್ ಪೋಡಿ ಕ್ರಮಕ್ಕಾಗಿ ಕಡತವನ್ನು ಭೂ ಮಾಪನ ಶಾಖೆಗೆ ಕಳುಹಿಸಲಾಗಿ, ದೈತ್ಯನಕೆರೆ ಕಾವಲ್ ಗ್ರಾಮದ ಸರ್ವೆ ನಂ.1ರ ಪ್ರದೇಶವು ಆಕಾರ್ ಬಂದ್ ರೀತ್ಯಾ 'ಬಿ' ಖರಾಬಿನಲ್ಲಿದ್ದು, 'ಬಿ' ಖರಾಬ್ ತರಹೇ ಯಲ್ಲಿರುವ ಪ್ರದೇಶವನ್ನು ಭೂ ಕಂದಾಯ ಕಾಯಿದೆ, ಕಲಂ 84ರ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ಹಿಡುವಳಿ ತರಹೆಗೆ ತರುವ ಸಂಬಂಧ ಅನುಮೋದನೆಯಾದಲ್ಲಿ ಪಕ್ಕಾ ಪೋಡಿ ದುರಸ್ತಿ ಕ್ರಮವಹಿಸಲು ಅವಕಾಶವಾಗುವ ಹಿನ್ನೆಲೆಯಲ್ಲಿ ಆ ಜಮೀನುಗಳನ್ನು ಹಿಡುವಳಿ ತರಹೆಗೆ ತಂದು ಕಂದಾಯ ನಿಗದಿಪಡಿಸಬೇಕಾಗಿದೆ. ತದನಂತರ, ನಮೂನೆ-1 ರಿಂದ 5ರ ದೃಢೀಕೃತ ದುರಸ್ತಿ ಬಗ್ಗೆ ಕ್ರಮ ವಹಿಸ ಬಹುದಾಗಿದೆ. ಅರಮನೆಗೆ ಸೇರಿದ ಜಮೀನುಗಳು ಸಂಬಂಧಪಟ್ಟವರಿಗೆ ವರ್ಗಾವಣೆ ಆಗಿರುವ ಬಗ್ಗೆ ಯಾವುದೇ ಮೂಲ ದಾಖಲೆಗಳು ತಾಲ್ಲೂಕ ಕಛೇರಿಯಲ್ಲಿ ಲಭ್ಯವಿಲ್ಲ. ಮೂಲ ಖಾತೆದಾರರಿಂದ 2-3 ಕ್ರಯವಾದ ನಂತರ ಈ ಬಗ್ಗೆ ಆದ ಬದಲಾವಣೆಗಳು ಮಾತ್ರ ಆರ್‌ಆರ್ 5 ಮತ್ತು 6ರಲ್ಲಿ ದಾಖಲೆಗಳಾಗಿವೆ. ಅರಮನೆ ಮುಖಾಂತರ ವರ್ಗಾವಣೆಯಾಗಿರುವ ಜಮೀನುಗಳು ಹಾಗೂ ದೈತ್ಯನಕೆರೆ ಕಾವಲ್ ಜಮೀನು ಮೂಲತಃ ಅರಮನೆ ಜಮೀನಾಗಿರುವುದರಿಂದ ಖರ್ದಾ ದಾಖಲೆ ಪ್ರಕಾರ 'ಸರ್ಕಾರಿ' ಎಂದು ನಮೂದಾಗಿದೆ. ಮೈಸೂರು ಜಿಲ್ಲೆಯಲ್ಲಿ ಅರಮನೆ ಕಾವಲ್ ಜಮೀನುಗಳಿಗೆ ಸಂಬಂಧಿಸಿದಂತೆ ಈವರೆವಿಗೂ ಮಾಲೀಕತ್ವ ನಿರ್ಣಯವಾಗದಿರುವುದರಿಂದ, ಈ ರೀತಿ 'ಬಿ' ಖರಾಬ್ ಶೀರ್ಷಿಕೆಯಲ್ಲಿರುವ ಜಮೀನುಗಳು ಈಗಲೂ ಸಹ 'ಸರ್ಕಾರಿ ಖರಾಬು' ಎಂಬ ಶೀರ್ಷಿಕೆಯಲ್ಲಿ ಮುಂದುವರೆಯುವುದು ಹಾಗೂ ಈ ಜಮೀನುಗಳ ಅಳತೆಗೆ ಯಾವುದೇ ಸ್ಪಷ್ಟೀಕರಣಗಳು\ ಆದೇಶಗಳು ಇಲ್ಲದ್ದರಿಂದ ಅರಮನೆ ಕಾವಲ್ ಜಮೀನುಗಳ ಅಳತೆಗೆ ಕ್ರಮವಹಿಸದೇ ನಮೂನೆ-1 ರಿಂದ 5 ತಯಾರಿಸಲ್ಪಟ್ಟಿಲ್ಲ. ಇದೇ ವಿಚಾರದಲ್ಲಿ ಕರ್ನಾಟಕ ಮಾಹಿತಿ ಹಕ್ಕು ಆಯೋಗದಲ್ಲಿ ಮೇಲ್ಮನವಿ ಸಂ:ಕ.ಮಾ.ಹ.10219/ಎಪಿಎಲ್/2014ರಲ್ಲಿ ಮೇಲ್ಮನವಿದಾರರಾದ ದೂರುದಾರರು ಕೋರಿರುವಂತಹ ಮಾಹಿತಿಯ ಬಗ್ಗೆ ಮೂಲ ಮಂಜೂರಿ ಕಡತಗಳು ಲಭ್ಯವಿಲ್ಲವೆಂದು ಪ್ರಮಾಣಿಸಿರುವುದಾಗಿ ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

MYS/9259/2017

ದಿ:10/01/13ರಲ್ಲಿ ಕಂದಾಯ ಇಲಾಖೆಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿ ಸರ್ವೆ ನಂ.1/35ಎ ಮತ್ತು 1/36ಎ ಜಮೀನಿನ ಹದ್ದುಬಸ್ತು ಮತ್ತು ದುರಸ್ತ್‌ಗಾಗಿ ಕೋರಿದ್ದು ಅದಕ್ಕೆ ಸಂಬಂಧಿಸಿದಂತೆ ಮೂಲ ದರಖಾಸ್ತು ಕಡತ ಪರಿಶೀಲಿಸಿ, ಕಾನೂನು ಪ್ರಕಾರ ಅಳತೆ ಕಾರ್ಯ ಕೈಗೊಂಡು ವರದಿ ಮಾಡುವಂತೆ ತಹಶೀಲ್ದಾರ್‌ರಿಗೆ ತಿಳಿಸಿದೆ. ದಿ:05/08/13ರ ಹಿಂಬರಹದಲ್ಲಿ ಆಯುಕ್ತರ ಕಛೇರಿ, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ರವರು ಹುಣಸೂರು ತಹಶೀಲ್ದಾರ್‌ರವರಿಂದ ಬಂದಂತಹ ವರದಿಯಲ್ಲಿ ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ದುರಸ್ತಿಯಾಗಿರುವುದು ಕಂಡು ಬರುವುದಾಗಿ ಹೇಳಿದ್ದಾರೆ. ಹುಣಸೂರು ತಹಶೀಲ್ದಾರ್‌ರವರು ತಮ್ಮ ಪತ್ರ ಸಂ:ಎಲ್‌ಎನ್‌ಡಿ(ಬಿ) 609/2012–13 ದಿ:23/04/14ರಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ರವರಿಗೆ ಸಲ್ಲಿಸಿದ ವರದಿಯಲ್ಲಿ ತಮ್ಮ ಕ್ರಯ ಪತ್ರವನ್ನಾದರಿಸಿ ಈಗಾಗಲೇ ಪೋಡಿ ದುರಸ್ತಿ ಕಾರ್ಯ ಪೂರ್ಣಗೊಳಿಸಿದೆ, ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿದೆಯೆಂದು ಹೇಳಿದ್ದಾರೆ. ಸದರಿ ಸ್ವತ್ತುಗಳ ಅಳತೆ ಮತ್ತು ದುರಸ್ತಿ ಕಾರ್ಯ ಮುಗಿದಿದ್ದರೂ ಎದುರುದಾರರು ವಿನಾಕಾರಣ ಖಾತೆ ಮಾಡಿಕೊಡಲು ವಿಳಂಬ ಮಾಡುತ್ತಿದ್ದಾರೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ದೂರುದಾರರು 2005ನೇ ವರ್ಷದಲ್ಲಿ ಖರೀದಿ ಮಾಡಿದ್ದಾರೆಂದು ಹೇಳಿದ ಜಮೀನುಗಳು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ಬಿಳಕೆರೆ ಹೋಬಳಿ ದ್ಯೆತ್ಯನಕೆರೆ ಗ್ರಾಮದಲ್ಲಿದೆ. ದೂರುದಾರರು ಹಾಜರುಪಡಿಸಿದ ದಿನಾಂಕ:21/03/05ರ ನೋಂದಾಯಿತ ಕ್ರಯ ಪತ್ರದಲ್ಲಿ ಸರ್ವೆ ನಂ.1/35ಎ–36ಎ ಒಟ್ಟು 7 ಎಕರೆ ಜಮೀನನ್ನು ಖರೀದಿಸಿರುವುದು ಕಂಡು ಬಂದಿದೆ. ಸದರಿ ಖರೀದಿಯಂತೆ ಅವರ ಹೆಸರಿನಲ್ಲಿ ಪಹಣಿ ದಾಖಲಾಗಿದೆ. ದೂರುದಾರರು ಖರೀದಿಸಿದ ಸ್ವತ್ತುಗಳ ಕ್ರಯ ಪತ್ರವನ್ನಾದರಿಸಿ, ಈಗಾಗಲೇ ಪೋಡಿ ದುರಸ್ತಿ ಕಾರ್ಯ ಪೂರ್ಣಗೊಳಿಸಲಾಗಿದೆಯೆಂದು ದಿ:23/04/14ರ ಪತ್ರ ಸಂ:ಎಲ್‌ಎನ್‌ಡಿ(ಬಿ) 609/2012–13ರಲ್ಲಿ ಹುಣಸೂರು ತಾಲ್ಲೂಕ್ ತಹಶೀಲ್ದಾರ್‌ರು ಮೈಸೂರು ಜಿಲ್ಲಾಧಿಕಾರಿಗಳಿಗೆ ಹೇಳಿದ್ದಾರೆ. ಅದೇ ರೀತಿ, ಭೂ ದಾಖಲೆಗಳ ಜಂಟಿ ನಿರ್ದೇಶಕರು (ವಿಚಾರಣೆ & ತನಿಖೆ), ಆಯುಕ್ತರ ಕಛೇರಿ, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ರವರು ದೂರುದಾರರಿಗೆ ದಿ:05/08/13ರಂದು ನೀಡಿದ ಹಿಂಬರಹದಲ್ಲಿ, ದೂರುದಾರರು ಖರೀದಿಸಿದ ಜಮೀನುಗಳು ಈಗಾಗಲೇ ದುರಸ್ತಿಯಾಗಿರುವುದು ಹುಣಸೂರು ತಾಲ್ಲೂಕ್ ತಹಶೀಲ್ದಾರ್‌ರ ವರದಿಯಲ್ಲಿ ಕಂಡು ಬರುವುದಾಗಿ ಹೇಳಿದ್ದಾರೆ. ದೂರುದಾರರು ಖರೀದಿ ಮಾಡಿದ ಜಮೀನಿನ ವಿಸ್ತೀರ್ಣಕ್ಕನುಗುಣವಾಗಿ ದುರಸ್ತಿ ಕ್ರಮ ವಹಿಸಲು ದಿ:29/06/07ರ ಅಧಿಕೃತ ಜ್ಞಾಪನದಲ್ಲಿ ಹುಣಸೂರು ತಾಲ್ಲೂಕ್ ತಹಶೀಲ್ದಾರ್‌ರವರಿಗೆ ಹುಣಸೂರು ಉಪವಿಭಾಗಾಧಿಕಾರಿಗಳು ಹೇಳಿದ್ದಾರೆ. ದೂರುದಾರರ ಕ್ರಯ ಪತ್ರವನ್ನಾದರಿಸಿ ಈಗಾಗಲೇ ಪೋಡಿ ದುರಸ್ತಿ ಕಾರ್ಯ ಪೂರ್ಣಗೊಳಿಸಲಾಗಿದೆಯೆಂದು ಮೈಸೂರು ಜಿಲ್ಲಾಧಿಕಾರಿಗಳಿಗೆ ಹುಣಸೂರು

Sd/-

ತಹಶೀಲ್ದಾರ್‌ರು ಬರೆದ ಪತ್ರ ದಿನಾಂಕ:23/04/14 ಸಂ:ಎಲ್ಎನ್‌ಡಿ(ಬಿ) 609/2012–13ರಲ್ಲಿ ಹೇಳಿದ್ದಾರೆ.

6. ಆದ್ದರಿಂದ, ದೂರುದಾರರು ಖರೀದಿಸಿದ ಸ್ವತ್ತಿನ ಬಗ್ಗೆ ಮುಂದಿನ ಕ್ರಮ ಕೈಗೊಂಡು ಖಾತೆ ಬದಲಾವಣೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

15/2/18

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**